1164 (2) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುವ ಔಷಧಿಗಳನ್ನು ಖರೀದಿ ಮಾಡಲು ಇಲಾಖೆ ಅನುಸರಿಸುತ್ತಿರುವ ನಿಯಮಗಳು ಯಾವುವು ;

ಆ) ಔಷಧಿ ಸರಬರಾಜು ವ್ಯವಸ್ಥೆಯಲ್ಲಿರುವ ಹಲವಾರು ನ್ಯೂನ್ಯತೆಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ;

ಇ) ಬಂದಿದ್ದಲ್ಲಿ ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಇಲಾಖೆಯು ಯಾವ ಪ್ರಮಾಣದಲ್ಲಿ ಔಷಧಿಗಳನ್ನು ಖರೀದಿಸಿ ಜಿಲ್ಲೆಗಳಿಗೆ ಸರಬರಾಜು ಮಾಡುತ್ತಿವೆ : (ಜಿಲ್ಲಾ ಪಂಚಾಯತ್‌ವಾರು ವಿವರಗಳನ್ನು ನೀಡುವುದು) ?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಅತ್ಯವಶ್ಯಕವಾಗಿ ಬೇಕಾದ ಔಷಧಿ ಪಟ್ಟಿ ಸಿದ್ದಪಡಿಸಿದ ನಂತರ ಅದನ್ನು ರಾಜ್ಯ ಮಟ್ಟದ ಥೆರಪೆಟಿಕ್ ಕಮಿಟಿ ಮುಂದೆ ಮಂಡಿಸಿ, ಅನುಮೋದನೆ ಪಡೆದು ಟೆಂಡರ್ ಮೂಲಕ ದರಗುತ್ತಿಗೆ ನಿಗದಿಪಡಿಸಲಾಗುವುದು. ನಂತರದಲ್ಲಿ ಆಸ್ಪತ್ರೆಗಳ ಬೇಡಿಕೆಗನುಗುಣವಾಗಿ ಔಷಧಿ ಸರಬರಾಜು ಮಾಡಲಾಗುವುದು.

ಆ) ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಜಿಲ್ಲಾ ಪಂಚಾಯತ್ ವ್ಯಾಪ್ತಿಯ 27 ಜಿಲ್ಲೆಗಳಲ್ಲಿನ ಆರೋಗ್ಯ ಸಂಸ್ಥೆಗಳಿಗೆ ಸರ್ಕಾರಿ ಔಷಧಿ ಮಳಿಗೆ ಅನುದಾನದಲ್ಲಿನ ಶೇ. 40 ರಷ್ಟು ಭಾಗದ ಮೌಲ್ಯದ ಔಷಧಿಗಳನ್ನು ಈ ಮಳಿಗೆಯಿಂದ ಬೇಡಿಕೆಯಂತೆ ನೇರವಾಗಿ ಸರಬರಾಜು ಮಾಡಲಾಗುವುದು. ಜಿಲ್ಲಾ ಪಂಚಾಯತ್ ವಲಯದ ಈ ಆರೋಗ್ಯ ಸಂಸ್ಥೆಗಳಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಗೊಳಿಸಿರುವ ಶೇ. 60 ರ ಮೌಲ್ಯಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಔಷಧಿ ಖರೀದಿ ಮಾಡುತ್ತಾರೆ.

1165 (761) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶೃಂಗೇರಿ ಕ್ಷೇತ್ರದ ನರಸಿಂಹರಾಜಪುರ, ಕೊಪ್ಪ ಹಾಗೂ ಶೃಂಗೇರಿಗಳಲ್ಲಿ ಮಾರ್ಚ್ ಅಂತ್ಯದ ವೇಳೆಗೆ ಇದ್ದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು (ತಾಲ್ಲೂಕುವಾರು ಹಾಗೂ ಶಾಲಾವಾರು ವಿವರ ನೀಡುವುದು) ;

ಆ) ಏಪ್ರಿಲ್‌ನಿಂದ ಇದುವರೆಗೆ ಈ ಸ್ಥಳಗಳಿಂದ ಬೇರೆಡೆಗೆ ವರ್ಗಾವಣೆಗೊಂಡ ಮತ್ತು ಈ ಸ್ಥಳಗಳಿಗೆ ಬೇರೆಡೆಯಿಂದ ವರ್ಗಾವಣೆಯಾಗಿ ಬಂದ ಶಿಕ್ಷಕರ ಸಂಖ್ಯೆ ಎಷ್ಟು ತಾಲ್ಲೂಕುವಾರು, ಶಾಲಾವಾರು ವಿವರ ನೀಡುವುದು ;

ಇ) ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರ ಹುದ್ದೆ ಖಾಲಿ ಇದ್ದರೂ ಬದಲಿ ಶಿಕ್ಷಕರನ್ನು ನೇಮಿಸದೆ ವರ್ಗಾವಣೆ ಮಾಡುತ್ತಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುವುದೆಂದು ಸರ್ಕಾರ ಭಾವಿಸಿಲ್ಲವೇ ;